ಸಂಯುಕ್ತ ಕರ್ನಾಟಕ

ಬೆಂಗಳೂರು

# ಪದವೀಧರರೇ ಹೆಚ್ಚು ನಿರುದ್ಯೋಗಿಗಳು

## ವಿದ್ಯಾರ್ಥಿಗಳಿಗೆ ಕೌಶಲ್ಯದ ಜ್ಞಾನ ಅಗತ್ಯ | ಶಿಕ್ಷಕರು ಆದರ್ಶ

**ಬೆಂಗಳೂರು:** ಪದವೀಧರರಾಗಿದ್ದರೂ ಕೌಶಲ್ಯ ಹೊಂದಿಲ್ಲದ ಕಾರಣದಿಂದ ನಿರುದ್ಯೋಗಿಗಳಾಗಿದ್ದಾರೆಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಪ್ರಥಮ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಕಿ ಅಂಶಗಳ ಪ್ರಕಾರ ಪದವೀಧರರಲ್ಲಿ ಶೇ.29.1ರಷ್ಟು ಮಂದಿಗೆ ಉದ್ಯೋಗ ಲಭ್ಯವಾಗಿಲ್ಲ. ಪ್ರಾಥಮಿಕ ಹಂತದ ಶಿಕ್ಷಣವನ್ನೂ ಪಡೆಯದವರಲ್ಲಿ ಶೇ.3.4ರಷ್ಟು ಮಾತ್ರ ನಿರುದ್ಯೋಗಿಗಳಾಗಿದ್ದಾರೆಂದರು.

ವಿದ್ಯಾರ್ಥಿಗಳು ವ್ಯಾಸಂಗದ ಜೊತೆ ಜೊತೆಗೆ ವಿವಿಧ ತರನಾದ ಕೌಶಲ್ಯಗಳ ಬಗ್ಗೆ ಹೆಚ್ಚಿನ ಅರಿವು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ ಎಂದ ಅವರು, ಆಧುನಿಕ ಕಾಲಘಟ್ಟದಲ್ಲಿ ಔದ್ಯೋಗಿಕ ಕ್ಷೇತ್ರಗಳಿಗೆ ಕೌಶಲ್ಯಗಳು ಅನಿವಾರ್ಯವಾಗುತ್ತಿರುವ ಸಂದರ್ಭದಲ್ಲಿ ಇವುಗಳ ಅವಶ್ಯಕತೆಯು ಹೆಚ್ಚಿನ ಪ್ರಾಮುಖ್ಯತೆ ಗಳಿಸಿಕೊಳ್ಳುತ್ತಿವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬಹುದು ಎಂದು ಹೇಳಿದರು.

ವ್ಯಾಸಂಗದ ಜೊತೆಗೆ ಕೌಶಲ್ಯ ತರಬೇತಿಯನ್ನು ಪರಿಣಾಮಕಾರಿಯಾಗಿ ನೀಡಲು ಈಗಾಗಲೇ ರಾಜ್ಯದ 45 ಕಾಲೇಜುಗಳಲ್ಲಿ ಬಿ.ಕಾಂ ಇ-ಕಾಮರ್ಸ್, ಬಿ.ಕಾಂ ಲಾಜಿಸ್ಟಿಕ್ಸ್, ಬಿ.ಕಾಂ ಇನ್ಸುರೇನ್ಸ್ ಹೀಗೆ ಹಲವು ರೀತಿಯ ಕೌಶಲ್ಯಯುತ ಕೋರ್ಸ್‌ಗಳನ್ನು ಪದವಿ ಮಟ್ಟದ 5 ಮತ್ತು 6ನೇ ಸೆಮಿಸ್ಟರ್‌ನಲ್ಲಿ ಅಳವಡಿಸಲಾಗುತ್ತಿದೆ. ಜೊತೆಗೆ ಈ ಕೋರ್ಸ್‌ಗಳನ್ನು ಪೂರ್ಣಗೊಳಿಸಿದವರು ರಿಲೆಯನ್ಸ್, ಟಾಟಾ ಸೇರಿ ಇತರೆ ಕಂಪನಿಗಳಲ್ಲಿ ಉದ್ಯೋಗಗಳನ್ನು ಪಡೆಯಬಹುದಾಗಿರುತ್ತದೆ ಎಂದು ತಿಳಿಸಿದರು.

ನಾರಾಯಣ ನರವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ತಿಮ್ಮಪ್ಪ ಹೆಗ್ಡೆ ಮಾತನಾಡಿ, ಪದವಿಗಳಿಸಿರುವ ನಿಮಗೆ ಬೋಧನೆ ಮಾಡಿರುವ ಶಿಕ್ಷಕರು ಎಂದಿಗೂ ಆದರ್ಶ ಎಂಬುದನ್ನು ಮರೆಯಬೇಡಿ. ಜೊತೆಗೆ ಇಂದು ಅತ್ಯುತ್ತಮವಾಗಿ ಸಾಧನೆ ಮಾಡುವ ಹಂತದಲ್ಲಿದ್ದೀರಾ ಎಂದರೆ ನಿಮ್ಮ ತಂದೆ-ತಾಯಿಗಳ ಪರಿಶ್ರಮ ಕೂಡ ಹೆಚ್ಚಿದೆ ಎಂಬುದು ಮನದಲ್ಲಿರಲಿ ಎಂದರು.

ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಕುಲಾಧಿಪತಿ ರೆ.ಫಾ.ಡಯನೇಶಿಯಸ್ ವಾಜ್ ಮಾತನಾಡಿ, ನೀವು ಪಡೆದ ಶಿಕ್ಷಣದಿಂದ ಸಮಾಜಕ್ಕೆ ಮೌಲ್ಯಯುತವಾದದ್ದನ್ನು ಕೊಡಲು ಮುಂದಾಗುವುದು ಅವಶ್ಯ. ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ ಹಲವು ಶೈಕ್ಷಣಿಕ ಚಟುವಟಿಕೆಗಳ ಮೂಲಕ ವಿಭಿನ್ನ ಮಾದರಿಯಲ್ಲಿ ಸಾಗುತ್ತಿದೆ ಎಂದು ತಿಳಿಸಿದರು. ವಿವಿ ಕುಲಪತಿ ರೆ.ಡಾ.ವಿಕ್ಟರ್ ಲೋಬೊ, ಡಾ.ಸಿ.ಮೋಹನ್‌ದಾಸ್, ಪ್ರೊ.ಡಾ.ಮೆಲ್ವಿನ್ ಕೊಲಾಸೊ ಮತ್ತಿತರರಿದ್ದರು.

### 15 ಚಿನ್ನದ ಪದಕ

ಒಟ್ಟು 693 ಅಭ್ಯರ್ಥಿಗಳು ವಿವಿಧ ವಿಭಾಗಗಳಲ್ಲಿ ಪದವಿ ಗಳಿಸಿ ಪ್ರಥಮ ಘಟಿಕೋತ್ಸವದಲ್ಲಿ ಭಾಗಿಯಾಗಿದ್ದರು. 15 ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದರೆ, 23 ಮಂದಿ ಬೆಳ್ಳಿ ಪದಕ ಸ್ವೀಕರಿಸಿ, 17 ವಿದ್ಯಾರ್ಥಿಗಳು ವಿವಿಧ ಪ್ರಶಸ್ತಿಗಳನ್ನು ಸ್ವೀಕರಿಸಿದರು. ಪದವಿ ಮಟ್ಟದಲ್ಲಿ 499 ಮಂದಿ ಅತ್ಯುನ್ನತ ಶ್ರೇಣಿ, 336 ಮಂದಿ ಪ್ರಥಮ ದರ್ಜೆ, 15 ಮಂದಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.



ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಪ್ರಥಮ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಪದವಿಗಳಿಸಿದ ವಿದ್ಯಾರ್ಥಿಗಳು.